# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 745 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್ ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಸರ್ಕಾರಿ ನೌಕರ ಪ್ರತಿ ತಿಂಗಳ ಮೊದಲ ಶನಿವಾರ ಸ್ವಯಂ ಪ್ರೇರಣೆಯಿಂದ ಖಾದಿ ಉಡುಪು ಧರಿಸಬೇಕೆಂಬ ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರಾಜ್ಯದ ಲಕ್ಷಾಂತರ ನೌಕರರ ಬೇಡಿಕೆಗೆ ತಕ್ಕಂತೆ 'ಅಸಲಿ ಖಾದಿ'ಯನ್ನು ಪೂರೈಸುವಷ್ಟು ಉತ್ಪಾದನಾ ಸಾಮರ್ಥ್ಯ ರಾಜ್ಯದ ಖಾದಿ ಗ್ರಾಮೋದ್ಯೋಗ ಸಂಘಗಳಿಗಿದೆಯೇ; | ರಾಜ್ಯ ಸರ್ಕಾರದ ಸರ್ಕಾರಿ ಸುತ್ತೋಲೆ ಸಂಖ್ಯೆ: ಮುಕಾ:11787194:2026 ದಿನಾಂಕ:29-01-2025 ರಂತೆ ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ ಸಂಸ್ಥೆಗಳು/ನಿಗಮ/ ಮಂಡಳಿ/ ಸ್ವಾಯತ್ತ ಸಂಸ್ಥೆಗಳು/ ವಿಶ್ವ ವಿದ್ಯಾಲಯಗಳ ಅಧಿಕಾರಿ/ ನೌಕರರುಗಳು "ಸ್ವಯಂ ಪ್ರೇರಣೆಯಿಂದ" ಪ್ರತಿ ತಿಂಗಳ ಮೊದಲ ಶನಿವಾರದಂದು ಖಾದಿ ಉಡುಪನ್ನು ಧರಿಸುವಂತೆ ಆದೇಶಿಸಿರುತ್ತದೆ.<br><br>ಖಾದಿ ಉತ್ಪಾದನ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಸುಮಾರು 180 ಕ್ಕೂ ಹೆಚ್ಚು ಸಂಸ್ಥೆಗಳು ಅರಳೆ ಖಾದಿ, ಉಣ್ಣೆ, ರೇಷ್ಮೆ ಉತ್ಪಾದಿಸುತ್ತಿದ್ದು, ಈಗಿನ ಆದೇಶದನ್ವಯ ಬೇಡಿಕೆ ಹೆಚ್ಚಾಗಿದ್ದು, ಬೇಡಿಕೆಯಂತೆ ಉತ್ಪಾದನೆ ಮಾಡಲಾಗುತ್ತಿದೆ. |
| (ಆ) | ಮಾರುಕಟ್ಟೆಯಲ್ಲಿ ಗಿರಣಿ ನೂಲಿನ 'ನಕಲಿ ಖಾದಿ'ಯ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನೌಕರರು ಅರಿಯದೆ ನಕಲಿ ಖಾದಿ ಖರೀದಿಸಿ ಮೋಸ ಹೋಗುವುದನ್ನು ತಡೆಯಲು ಮತ್ತು ಅವರು ಖರೀದಿಸುವ ಹಣ ನೇರವಾಗಿ ನೇಕಾರರಿಗೆ ತಲುಪುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಮುನ್ನೆಚ್ಚರಿಕಾ ಕ್ರಮಗಳೇನು; | ಹೌದು, ಗಿರಣಿ ನೂಲಿನಿಂದ ಖಾದಿ ಬಟ್ಟೆ ತಯಾರಿಕೆಯನ್ನು ನಿಷೇಧಿಸಲಾಗಿದೆ. ನೌಕರರು ಅಸಲಿ ಖಾದಿ ಖರೀದಿಸಲು ಅನುವಾಗುವಂತೆ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಖಾದಿ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಇದೇ ರೀತಿಯ ವ್ಯವಸ್ಥೆ ಮಾಡಲಾಗುವುದು. ಖಾದಿ ಸಂಸ್ಥೆಗಳು ನೇರವಾಗಿ ಮಾರಾಟದಲ್ಲಿ ಪಾಲ್ಗೊಳ್ಳುವುದರಿಂದ ಖರೀದಿಯಿಂದ ಬಂದ ಹಣ ಖಾದಿ ಸಂಸ್ಥೆಗಳ ಮೂಲಕ ಕಸುಬುದಾರರಿಗೆ ನೇರವಾಗಿ ತಲುಪುವಂತಾಗುತ್ತದೆ. |
| (ಇ) | ರಾಜ್ಯದ ಖಾದಿ ಸಂಸ್ಥೆಗಳಲ್ಲಿ ಪ್ರಸ್ತುತ ಇರುವ ಬಟ್ಟೆಗಳ ಗುಣಮಟ್ಟ, ಬಣ್ಣ ಮತ್ತು ವಿನ್ಯಾಸಗಳು ಇಂದಿನ ಮಾರುಕಟ್ಟೆಯ ಸ್ಪರ್ಧೆಗೆ ಸಾಲದಾಗಿದ್ದು ಖಾದಿ ಉಡುಪುಗಳನ್ನು ಹೆಚ್ಚು ಆಕರ್ಷಕವಾಗಿಸಲು ಮತ್ತು ಆಧುನಿಕ ವಿನ್ಯಾಸಗಳನ್ನು ಅಳವಡಿಸಲು ಸರ್ಕಾರ ನೇಕಾರರಿಗೆ ಯಾವ ತಾಂತ್ರಿಕ ನೆರವು ನೀಡುತ್ತಿದೆ; | ಖಾದಿ ಉಡುಪು ದೇಶದ ಸ್ವಾಭಿಮಾನದ ಸಂಕೇತವಾಗಿದ್ದು, ಸಾಂಪ್ರದಾಯಿಕ ಶೈಲಿಯಲ್ಲಿ ಸಿದ್ದವಾಗುತ್ತಿದ್ದು, ಕಾಲಕ್ಕೆ ತಕ್ಕಂತೆ ಖಾದಿ ಉಡುಪನ್ನು ಆಕರ್ಷಕವಾಗಿ ಮಾಡಲು ಆಧುನಿಕ ವಿನ್ಯಾಸಗಳು ಹಾಗೂ ಹೊಸ ಬಣ್ಣಗಳನ್ನು ಅಳವಡಿಸಿಕೊಳ್ಳಲು ಖಾದಿ ಮಂಡಳಿಯಿಂದ ಖಾದಿ ಸಂಘ-ಸಂಸ್ಥೆಗಳ ನೇಕಾರರು, ನೂಲುಗಾರರಿಗೆ ಮಹಾತ್ಮಗಾಂಧಿ ಗ್ರಾಮೀಣ ಕೈಗಾರೀಕರಣ ಸಂಸ್ಥೆ (MGIRI), ವಾದ್ರಾ, ಮಹಾರಾಷ್ಟ್ರ., ಕೇಂದ್ರ ಸರ್ಕಾರದ ಸಂಸ್ಥೆಯಿಂದ ಹೊಸ ತಂತ್ರಜ್ಞಾನದ ತರಬೇತಿ ನೀಡಲಾಗಿದೆ. ಇದರಲ್ಲಿ ಮಗ್ಗ, ಚರಕ, ಡಿಸೈನ್ ಡೆವಲಪ್‌ಮೆಂಟ್ ಬಗ್ಗೆ ತರಬೇತಿ ಪಡೆಯಲಾದ ತರಬೇತುದಾರರುಗಳಿಗೆ ಆಯಾಯ ಖಾದಿ ಸಂಸ್ಥೆಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಂಡು ನವೀನ ಮಾದರಿಯ ಖಾದಿ ಉಡುಪುಗಳನ್ನು ತಯಾರು ಮಾಡಲು ಪ್ರಾರಂಭಿಸಿರುತ್ತಾರೆ. |

| | | |
|---|---|---|
| (ಈ) | ಈ ಸರ್ಕಾರಿ ನೌಕರರಿಗೆ ಖಾದಿಯ ಮೌಲ್ಯ ಮತ್ತು ಗ್ರಾಮೀಣ ಆರ್ಥಿಕತೆಯ ಮೇಲೆ ಅದರ ಪ್ರಭಾವದ ಕುರಿತು ಅರಿವು ಮೂಡಿಸಲು ಸರ್ಕಾರವು ಯಾವುದಾದರೂ ವಿಶೇಷ ಕಾರ್ಯಗಾರ ಅಥವಾ ಸಂವಾದಗಳನ್ನು ಆಯೋಜಿಸಲು ಯೋಜಿಸಿದೆಯೇ; | ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಆಯೋಜಿಸುವ ರಾಜ್ಯ ಮಟ್ಟದ ಖಾದಿ ಉತ್ಪನ್ನಗಳ ಮಾರಾಟ ಮೇಳದಲ್ಲಿ ಈ ಕುರಿತು ಉಪನ್ಯಾಸ ಏರ್ಪಡಿಸಿ, ಸರ್ಕಾರಿ ನೌಕರರನ್ನು ಸಹ ಆಹ್ವಾನಿಸಲಾಗುತ್ತದೆ. |
| (ಉ) | ರಾಜ್ಯದ ಖಾದಿ ಸಂಸ್ಥೆಗಳ ಅಭಿವೃದ್ಧಿಗಾಗಿ ಮತ್ತು ನೇಕಾರರ ಆರ್ಥಿಕ ಸಬಲೀಕರಣಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು? (ವಿವರ ನೀಡುವುದು) | ಪ್ರತಿ ವರ್ಷ ಖಾದಿ ಸಂಸ್ಥೆಗಳು ಹಾಗೂ ಖಾದಿ ವಲಯದಲ್ಲಿ ಕೆಲಸ ಮಾಡುವ ಕಸುಬುದಾರರುಗಳಿಗೆ ಕ್ರಮವಾಗಿ ರೂ.15.00 ಕೋಟಿ ಮಾರುಕಟ್ಟೆ ಸಹಾಯಧನ ಹಾಗೂ ರೂ.20.00 ಕೋಟಿ ಅನುರೂಪ ವೇತನ ಒಟ್ಟು ರೂ.35.00 ಕೋಟಿಗಳನ್ನು ಸರ್ಕಾರವು ಬಿಡುಗಡೆ ಮಾಡುತ್ತಿದೆ. |

ಸಿಐ 16 ಎಸ್‌ಎಲ್‌ವಿ 2026

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ
ಸಚಿವರು.